ಓ.ಎಸ್. ನಂ. 22/2017

ಡಿ.ಡಬ್ಲ್ಯೂ: 01 (ಇಶಾಕ್ ಸಾಹೇಬ್)

ದಿನಾಂಕಃ 21.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ – ಶ್ರೀ BSP ವಕೀಲರಿಂದ.

ಮೌಖಿಕವಾಗಿ ಪಾಲು ವಿಭಾಗ ಆದ ದಿನಾಂಕ ಹೇಳಲಾಗುವುದಿಲ್ಲ, ಆದರೆ 35 ವರ್ಷಗಳ ಹಿಂದೆ ಆಗಿರುತ್ತದೆ. ತಂದೆಯ ತಂದೆಯ ಹೆಸರು ಚೋರನೂರು ಗಫುರ್ ಸಾಬ್. ಗಫುರ್ ಸಾಬ್ ಅವರ ತಂದೆಯ ಹೆಸರು ಹೊನ್ನುರಸಾಬ್ ಎಂದರೆ ನನಗೆ ಗೊತ್ತಿಲ್ಲ. ಗಫುರ್ ಸಾಬ್ ಯಾವಾಗ ಮೃತಪಟ್ಟರು ಎಂದು ನನಗೆ ಗೊತ್ತಿಲ್ಲ. ಗಫುರ್ ಸಾಬ್ ಅವರ ಹೆಂಡತಿಯ ಹೆಸರು ಇಮಾಮ್‌ಬೀ. ಇಮಾಮ್‌ಬೀ ಅವರು 2003 ರಲ್ಲಿ ಮೃತಪಟ್ಟಿರುತ್ತಾರೆ. ಅವರು ದಿಃ 18.03.2003 ರಂದು ಮೃತಪಟ್ಟಿರುತ್ತಾರೆ ಎಂದರೆ ಹೌದು. ಗಫುರ್ ಸಾಬ್ ಮತ್ತು ಇಮಾಮ್‌ಬೀ ಅವರಿಗೆ ಹೊನ್ನುರಸಾಬ್, ಮಾಬುಬೀ, ಕರೀಂಸಾಬ್, ಫಾತೀಮಾಬೀ, ಹುಸೇನ್‌ಬೀ ಎಂಬ 5 ಜನ ಮಕ್ಕಳಿರುತ್ತಾರೆ. ಅವರೆಲ್ಲ ಈ ದಾವೆಯಲ್ಲಿ ಪಕ್ಷಗಾರರು ಎಂದರೆ ಹೌದು.

ನನ್ನ ತಂದೆ ಹೊನ್ನುರಸಾಬ್ 1998-ಜೂನ್ ರಲ್ಲಿ ಮೃತಪಟ್ಟಿರುತ್ತಾರೆ. ಅವರು ದಿಃ 06.06.1998 ರಂದು ಮೃತಪಟ್ಟಿರುತ್ತಾರೆ ಎಂದರೆ ಹೌದು. ಆ ಸಂಬಂಧ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ನನ್ನ ತಾಯಿ ಅಲೀಮಾಬೀ, ಅವರು 1 ನೇ ಪ್ರತಿವಾದಿ ಎಂದರೆ ಹೌದು. ನನ್ನ ತಂದೆ ತಾಯಿಗೆ ನಾವು 6 ಜನ ಮಕ್ಕಳು ಇದ್ದು, ಅವರು ಪಕ್ಷಗಾರರು ಎಂದರೆ ಹೌದು. ನನ್ನ ತಂದೆಯ ತಂಗಿ ಮೆಹಬೂಬೀ ಈಗ ಮೃತಪಟ್ಟಿರುತ್ತಾರೆ. ಆ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ದಾವೆಯಲ್ಲಿ ಅವರು ಹಾಜರಾಗಿರುವುದಿಲ್ಲ ಎಂದರೆ ಹೌದು. ನನ್ನ ಚಿಕ್ಕಪ್ಪ ಕರೀಂಸಾಬ್ ಅವರ ಹೆಂಡತಿ ಖೈರುನ್‌ಬೀ ಹಾಗೂ ಅವರ ಮಗಳು ಈ ದಾವೆಯನ್ನು ಹೂಡಿರುತ್ತಾರೆ ಎಂದರೆ ಹೌದು. ಖೈರುನ್‌ಬೀ ಅವರ ಮಗ ಹುಸೇನ್ ಸಾಬ್ ಚಿಕ್ಕ ವಯಸ್ಸಿನಲ್ಲಿಯೇ ಮೃತಪಟ್ಟಿರುತ್ತಾರೆ.

ಫಾತೀಮಾಬೀ 2025 ರ ಫೆಬ್ರವರಿಯಲ್ಲಿ ಮೃತಪಟ್ಟಿರುತ್ತಾರೆ. ಹುಸೇನ್‌ಬೀ ಈ ದಾವೆಯಲ್ಲಿ 9 ನೇ ಪ್ರತಿವಾದಿ ಎಂದರೆ ಹೌದು. ಫಾತೀಮಾಬೀ ಅವರು ಈ ನ್ಯಾಯಾಲಯದಲ್ಲಿ ದಾವೆಗೆ ಹಾಜರಾಗಿರಲಿಲ್ಲ. ನನ್ನ ತಂದೆಗೆ ಪಾಲು ವಿಭಾಗದಲ್ಲಿ 106 ಬಿ/8, 108 ಬಿ/2, ಒಟ್ಟು 3.96 ಎಕರೆ ಬಂದಿತ್ತು. ನನ್ನ ಚಿಕ್ಕಪ್ಪನಿಗೆ ಯಾವ ಸರ್ವೆ ನಂಬರುಗಳು ಮೌಖಿಕ ಪಾಲು ವಿಭಾಗದಲ್ಲಿ ಹೋಗಿದ್ದವು ಎಂದು ನನಗೆ ಗೊತ್ತಿಲ್ಲ.

ದಾವಾ ಆಸ್ತಿ 1 ಮತ್ತು 2 ಮೂಲತಃ ಗಫುರ್ ಸಾಬ್ ಆದ ನನ್ನ ತಾತನ ಹೆಸರಿನಲ್ಲಿತ್ತು. ನಾನು ಹೇಳಿದಂತೆ ಮೌಖಿಕ ವಿಭಾಗವಾದ ನಂತರ ಎಷ್ಟನೇ ಇಸವಿಯಲ್ಲಿ ಮ್ಯುಟೇಶನ್ ನನ್ನ ತಂದೆಯ ಹೆಸರಿಗೆ ಆಯಿತು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಹಿರಿಯ ಮಗ ಆಗಿದ್ದು, ಕುಟುಂಬವನ್ನು ನಿರ್ವಹಿಸುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಹಿರಿಯ ಮಗನಾದ ಕಾರಣ ನನ್ನ ಅಜ್ಜನ ಆಸ್ತಿಗಳು ಆತನ ಹೆಸರಿಗೆ ಮ್ಯುಟೇಶನ್

ಆಗಿದ್ದವು ಎಂದರೆ ಸರಿಯಲ್ಲ. ನನ್ನ ತಂದೆ ಹಾಗೂ ಆತನ ಚಿಕ್ಕಪ್ಪರವರು ಹುಸೇನ್‌ಬೀ, ಫಾತೀಮಾಬೀ ಅವರ ಮದುವೆಯಾಗುವವರೆಗೂ ಒಟ್ಟಿಗೆ ಇದ್ದರು ಎಂದರೆ ಹೌದು. ಹುಸೇನ್‌ಬೀ ಅವರ ಮದುವೆಯಾಗಿ ಎಷ್ಟು ವರ್ಷ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ 3 ರಲ್ಲಿ 1.1 ಸೆಂಟ್ಸಗೆ ಸಂಬಂಧಪಟ್ಟಂತೆ ಪೋತಿ ವಾರಸು ಪ್ರಕಾರ ನನ್ನ ತಂದೆಯ ಹೆಸರಿಗೆ ಬಂದಿದೆ ಎಂದು ಬರೆದಿದೆ ಎಂದರೆ ಅದು ನನ್ನ ಅಜ್ಜಿ ಖರೀದಿ ಮಾಡಿದ ಆಸ್ತಿ. ನಿಪಿ 6 ರಲ್ಲಿ ಸಹ ಅದೇ ರೀತಿ ಕಾಣುತ್ತಿದೆ ಎಂದರೆ ಹೌದು.

ನಿಪಿ 59 ರಲ್ಲಿ ನನ್ನ ತಾಯಿಯ ಹೆಸರಿಗೆ ಪೋತಿ ವಾರಸು ಪ್ರಕಾರ ಐಟಂ ನಂಬರ್ 1 ಮತ್ತು 2 ಬಂದಿದೆ ಎಂದು ಕಾಣಿಸುತ್ತಿದೆ ಎಂದರೆ ಹೌದು. ಈ ಸರ್ವೆ ನಂಬರುಗಳು ಅಂದರೆ ಐಟಂ ನಂಬರ್ 1 ಮತ್ತು 2 ಗಳನ್ನು ನನ್ನ ತಾಯಿ ವಾದಿಗಳ ಗಮನಕ್ಕೆ ತರದಂತೆ ಮಾಡಿಸಿಕೊಂಡಿದ್ದಾರೆ ಎಂದರೆ ಗಂಡನಿಂದ ಹೆಂಡತಿಗೆ ಬಂದಿವೆ. ಈ ವಿಷಯ ಗೊತ್ತಾದ ನಂತರ ವಾದಿಗಳು ಅವರ ಪಾಲನ್ನು ಕೇಳಿದ್ದರು ಎಂದರೆ ಇಲ್ಲ. ಭಾಗ ಕೊಡದೇ ಇರುವ ಕಾರಣ ನಮಗೆ ತಿಳುವಳಿಕೆ ಪತ್ರ ನೀಡಿ ಓ ಎಸ್ 124/12 ರಂತೆ ದಾವೆಯನ್ನು ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದರಲ್ಲಿ 2 ಆಸ್ತಿಗಳನ್ನು ಸೇರಿಸದ ಕಾರಣ ಆ ದಾವೆಯನ್ನು ಹಿಂಪಡೆದು ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಹೌದು.

ಐಟಂ ನಂಬರ್ 1 ಮತ್ತು 2 ಕ್ಕೆ ಬೇರೆ ಬೇರೆ ಚೆಕ್‌ಬಂದಿ ಇದೆ ಎಂದರೆ ಒಂದೇ ಚೆಕ್‌ಬಂದಿ ಇದೆ. ನಾವು ಎಫ್ ಎಂ ಬಿ ಸ್ಕೆಚ್ ಹೊಲಕ್ಕೆ ಸಂಬಂಧಪಟ್ಟಂತೆ ಹಾಜರುಪಡಿಸಿರುವುದಿಲ್ಲ. ನಾನು ಹಾಜರುಪಡಿಸಿದ ದಿಃ 18.02.1962 ರ ಸರ್ವೆ ನಂಬರ್ 832 ಎ ಪೈಕಿ 21 ಸೆಂಟ್ಸಗೆ ಸಂಬಂಧಪಟ್ಟಿದ್ದು ಎಂದರೆ ಹೌದು. ಅದು ನನ್ನ ತಾತ ಖರೀದಿ ಮಾಡಿದ ಆಸ್ತಿ ಎಂದರೆ ಹೌದು. ಅದೇ ಸರ್ವೆ ನಂಬರಿನಲ್ಲಿ ಈಗ ಐಟಂ ನಂಬರ್ 5-8 ಉಪವಿಭಾಗಗೊಂಡಿದೆ ಎಂದರೆ ಹೌದು. ಸರ್ವೆ ನಂಬರ್ 832 ರಲ್ಲೇ ಐಟಂ ನಂಬರ್ 9 ಮತ್ತು 10 ರಲ್ಲಿರುವ ಮನೆಗಳನ್ನು ಕಟ್ಟಲಾಗಿದೆ ಎಂದರೆ ಹೌದು.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.